**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**
**ಸಿ.ಸಿ. 23/2025**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 6**
**ದಿನಾಂಕಃ** 01.07.2026 **ಸಿಡಬ್ಲ್ಯೂ** 10

| | |
|---|---|
| ಹೆಸರು | ಮೊಹಮದ್ ಖಾಲೀದ್ ಎ. ಎಸ್. |
| ತಂದೆಯ ಹೆಸರು | ಹಜೀಜ್ ಶೇಖ್ |
| ವಯಸ್ಸು | 48 ವರ್ಷ |
| ಉದ್ಯೋಗ | ಹಿರಿಯ ಮೋಟಾರ್ ವಾಹನ ನಿರೀಕ್ಷಕರು, ಪ್ರಾದೇಶಿಕ ಸಾರಿಗೆ ಕಚೇರಿ, ಹೊಸಪೇಟೆ |
| ವಾಸ ಸ್ಥಳ | ಹೊಸಪೇಟೆ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು 2012 ರಿಂದ 2025 ರವರೆಗೆ ನಾನು ದಾವಣಗೆರೆ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಮೋಟಾರ್ ವಾಹನ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ05.11.2024 ರಂದು ಪಿಎಸ್ಐ ಗ್ರಾಮಾಂತರ ಪೋಲೀಸ್ ಠಾಣೆ ರವರ ಕೋರಿಕೆ ಮೇರೆಗೆ ಗ್ರಾಮಾಂತರ ಪೋಲೀಸ್ ಠಾಣೆಯ ಆವರಣದಲ್ಲಿ 2 ವಾಹನಗಳನ್ನು ಪರಿಶೀಲನೆ ಮಾಡಿರುತ್ತೇನೆ. ಕೆಎ 27 ಎಫ್ 0811 ಕೆಎಸ್ ಆರ್ ಟಿ ಸಿ ಬಸ್ ಆಗಿದ್ದು ಸದರಿ ವಾಹನದ ಮುಂಭಾಗ ಜಖಂ ಗೊಂಡಿರುತ್ತದೆ. ಹಿಂಬಾಗದ ಬಂಪರ್ ಮತ್ತು ಎಡಬದಿಯ ಹೆಡ್ ಲೈಟ್ ಜಖಂಗೊಂಡಿರುತ್ತದೆ. ಇನ್ನಿತರ ಭಾಗಗಳು ಸುಸ್ಥಿತಿಯಲ್ಲಿದ್ದವು. ಇನ್ನೊಂದು ವಾಹನ ಕೆಎ 02 ಎಂ ಕೆ-1722 ಒಂದು ಮಾರುತಿ ಸ್ವಿಫ್ಟ್ ಕಾರ್ ಆಗಿದ್ದು ಸದರಿ ವಾಹನದ ಹಿಂಬಾಗದ ಬಂಪರ್ ಜಖಂಗೊಂಡಿರುತ್ತದೆ. ಹಿಂಭಾಗದ ಡಿಕ್ಕಿ ಡೋರ್ ಮತ್ತು ಅದರ ಗಾಜುಗಳು ಜಖಂಗೊಂಡಿರುತ್ತದೆ. ಹಿಂಬಾಗದ 2 ಟೇಲ್ ಲ್ಯಾಂಪ್ ಜಖಂಗೊಂಡಿರುತ್ತದೆ. ಹಿಂಬಾಗದ ಎರಡೂ ಬಾಗಿಲುಗಳು ಜಖಂಗೊಂಡಿರುತ್ತದೆ. ಹಿಂಬಾಗದ ರೂಫ್ ಜಖಂಗೊಂಡಿರುತ್ತದೆ. ಇನ್ನಿತರ ಬಾಗಗಳು ಸುಸ್ಥಿತಿಯಲ್ಲಿದ್ದವು. ಸದರಿ 2 ವಾಹನಗಳು ರಸ್ತೆಯ ಮೇಲೆ ಓಡಾಡುವ ಸುಸ್ಥಿತಿಯಲ್ಲಿದ್ದು ಅದರ ತಡೆಗಳು ಸುಸ್ಥಿತಿಯಲ್ಲಿದ್ದವು. ನನ್ನ ಅಭಿಪ್ರಾಯದ ಪ್ರಕಾರ ಎರಡೂ ವಾಹನಗಳಲ್ಲಿ ಯಾವುದೇ ಯಾಂತ್ರಿಕ ದೋಷದಿಂದ ಅಪಘಾತ ಸಂಭವಿಸಿರುವುದಿಲ್ಲ ಎಂದು ಅಭಿಪ್ರಾಯ ಪಟ್ಟಿರುತ್ತೇನೆ. ಈ ಕುರಿತು ನಾನು ವರದಿ ನೀಡಿರುತ್ತೇನೆ. ಸಾಕ್ಷಿಯು ತಮ್ಮ ವರದಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ.10 ಎಂದು, ಸಾಕ್ಷಿಯ ಸಹಿಯನ್ನು ನಿಪಿ.10 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಆರೋಪಿತರ ಶ್ರೀ ಎಂ ವಿ ಎಂ ವಕೀಲರಿಂದಃ

ಪೋಲೀಸರು ನಿವೇದಿಸಿಕೊಂಡ ಸಮಯವನ್ನು ನಮೂದಿಸಿಲ್ಲ ಎಂದರೆ ಸರಿ. ನನ್ನ ವರದಿಯನ್ನು ವಾಹನಗಳಿಗೆ ಆದಂತಹ ಜಖಂಗಳು ಹೊಸದಾಗಿ ಆದಂತಹ ಜಖಂಗಳು ಅಥವಾ ಹಳೆಯ ಜಖಂಗಳು ಎಂದು ನಮೂದಿಸಿಲ್ಲ ಎಂದರೆ ಸರಿ. ನಾನು ಪೋಲೀಸರ ಮಾತನ್ನು ಕೇಳಿ ಯಾವುದೇ ವಾಹನಗಳನ್ನು ಪರಿಶೀಲಿಸದೇ ಸುಳ್ಳು ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಮುಂದಿನ ವಾಹನ ತನ್ನ ರಸ್ತೆಯ ಪಥವನ್ನು ಬದಲಿಸಿದಾಗ ಹಿಂದಿನ ವಾಹನ ಡಿಕ್ಕಿ ಪಡಿಸಿದಾಗ ನಾನು ವರದಿಯಲ್ಲಿ ನಮೂದಿಸಿದ ಜಖಂಗಳು ಆಗುವ ಸಾಧ್ಯತೆ ಇರಬಹುದು ಎಂದರೆ ಸಾಕ್ಷಿ ಆಗಬಹುದು ಎಂದು ಉತ್ತರಿಸುತ್ತಾರೆ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ.